ಶಿರೋಳ ಗ್ರಾಮಕ್ಕೊಂದು 33ಕೆ.ವಿ. ಸ್ಟೇಷನ್

124 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮದ ರೈತರು 33.ಕೆ.ವಿ. ಸ್ಟೇಷನ್‌ಗೆ ಬೇಕಾಗುವ ಜಮೀನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಹಾಗಿದ್ದರೆ ಸರ್ಕಾರ ಶಿರೋಳ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್ ಕೆಲಸವನ್ನು 1996-97ನೇ ಸಾಲಿನಲ್ಲಿ ಮುಂಜೂರು ಮಾಡಿ.*

ಶ್ರೀ ಜೆ. ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮದ ರೈತರು33 ಕೆ.ವಿ. ಸ್ಟೇಷನ್ ನಿರ್ಮಾಣಕ್ಕೆ ಯಾವುದೇ ಜಮೀನನ್ನು ಮಂಡಳಿಗೆ ನೀಡಿರುವುದಿಲ್ಲ.

ಆ) ಈ ತಾಲ್ಲೂಕಿನ ಶಿರೋಳ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್ನನ್ನು ಸ್ಥಾಪಿಸಿರುವ ಬಗ್ಗೆ ಪ್ರಸ್ತಾವನೆಯನ್ನು ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮದಲ್ಲಿ 33 ಕೆ.ವಿ. ಸ್ಟೇಶನ್‌ಗೆ ಯಾವುದೇ ಜಮೀನನ್ನು ಒದಗಿಸಿಲ್ಲ ಎಂದು ಕೊಟ್ಟಿದ್ದಾರೆ. ಆದರೆ ಅದು ತಪ್ಪು ಮಾಹಿತಿ ಇದೆ. ಈಗಾಗಲೇ ಜಮೀನನ್ನು ಮಂಡಳಿಯ ಹೆಸರಿಗೆ ವರ್ಗಾಯಿಸಿ ಉತಾರೆಯನ್ನು ಕೂಡ ನಾನು ತಂದು ಮಂಡಳಿಗೆ ಒದಗಿಸಿದ್ದೇನೆ. ಆಮೇಲೆ 1996-97ನೇ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಲು ಸಿದ್ಧ. ಇದೆಯೋ ಇಲ್ಲವೋ ಎನ್ನತಕ್ಕಂಥ ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೂ ಕೂಡ ನಿಖರವಾದ ಉತ್ತರ ಇಲ್ಲ. ಆದಕಾರಣ ದಯವಿಟ್ಟು ಖಚಿತವಾದ ಉತ್ತರವನ್ನು ಒದಗಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಕರ್ನಾಟಕ ವಿದ್ಯುತ್ 33.ಕೆ.ವಿ. ಸ್ಟೇಶನನ್ನು ಕಟ್ಟಲು ಜಮೀನನ್ನು ಯಾರೂ ಕೊಟ್ಟಿಲ್ಲ. ಆದರೆ ಇಲ್ಲಿ 33 ಕೆ.ವಿ. ಸ್ಟೇಶನ್ ಅವಶ್ಯವೆಂದು ನಮ್ಮ ಟೆಕ್ನಿನಲ್ ಕಮಿಟಿಯವರು - ಶಿಫಾರಸ್ಸು ಮಾಡಿದ್ದಾರೆ. ಮಾನ್ಯ ಸದಸ್ಯರು ಆದಷ್ಟು ಬೇಗ ಅಗತ್ಯವಾದ ಜಮೀನನ್ನು ಕರ್ನಾಟಕ ವಿದ್ಯುತ್ ಮಂಡಳಿಗೆ ಒದಗಿಸಲು ಪ್ರಯತ್ನ ಪಟ್ಟರೆ ಸ್ಟೇಶನನ್ನು ಕಟ್ಟುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಜಮೀನನ್ನು ಒದಗಿಸಲಾಗಿದೆ. ನಾನು ಅದಕ್ಕೆ ಬೇಕಾದ ರೆಕಾರ್ಡ ಆಫ್ ರೈಟ್ಸನ್ನು ತಂದು ಮಂಡಳಿಗೆ ಒಪ್ಪಿಸಿದ್ದೇನೆ. ಹಾಗೂ ಬಿಜಾಪುರಕ್ಕೆ ಅಧ್ಯಕ್ಷರು ಬಂದು ಸಭೆ ನಡೆಸಿದಾಗ ಅಧ್ಯಕ್ಷರ ಗಮನಕ್ಕೂ ತಂದಿದ್ದೇನೆ. ಅವರೂ ಕೂಡ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಆದಕ್ಕಾಗಿ 1996-97ನೇ ಸಾಲಿಗೆ ಮಾಡಿ ರೈತರ ಕಷ್ಟವನ್ನು ಪರಿಹಾರ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇನ್ನು ಜಮೀನು ಕರ್ನಾಟಕ ವಿದ್ಯುತ್ ಮಂಡಳಿಗೆ ಕೊಟ್ಟಿಲ್ಲ. ಒಂದು ವೇಳೆ ಕೊಟ್ಟಿದ್ದರೆ ಕಟ್ಟಿಸುತ್ತೇವೆ.

ಶ್ರೀ ಗೋಪಿಂದಪ್ಪ ಎಂ. ಕಾರಜೋಳ : ಈಗಾಗಲೇ ಜಮೀನನ್ನು ಕೊಟ್ಟಿದ್ದೇವೆ. ರಿಜಿಸ್ಟ್ರೇಷನ್ ಕೂಡ ಆಗಿದೆ.

ಅಧ್ಯಕ್ಷರು : ಕೊಟ್ಟಿದ್ದರೆ ಕಟ್ಟಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೇನೆಂದರೆ ಕೆ.ಇ.ಬಿ. ಅವರದೇ, ಅವರು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆದರೆ ಮಾನ್ಯ ಸದಸ್ಯರು ನಾನು ಕೊಟ್ಟಿದ್ದೇನೆ, ಕೊಟ್ಟಿರುವ ಡಾಕ್ಯುಮೆಂಟ್ಸ್ ನನ್ನ ಹತ್ತಿರ ಇದೆ ಎಂದು ಹೇಳುತ್ತಾರೆ, ಇದುವರೆಗೂ, ಅದರ ಮಾಹಿತಿ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಇಲ್ಲವೆಂದರೆ ಕಷ್ಟ ಆಗುತ್ತದೆ. ರಿಜಿಸ್ಟ್ರೇಶನ್ ಕೆ.ಇ.ಬಿ. ಘೇವರನಲ್ಲಿ ಮಾಡಿಕೊಡುತ್ತಾರೆ. ನಿಮಗೆ ಹೇಗೆ ಮಾಹಿತಿ ಇರುವುದಿಲ್ಲ?

ಅಧ್ಯಕ್ಷರು : ಬಸವರಾಜರವರೇ, ಶ್ರೀ ಎಂ.ಪಿ. ಪ್ರಕಾಶ, ಗ್ರಾಮೀಣಾಭಿವೃದ್ಧಿ ಸಚಿವರು ಬರಬೇಕಾದರೆ ಅವರ ಟ್ರೇನ್ ತೊಂದರೆಯಾಗಿ ಡಿಲೇ ಆಗಿದೆ. ಅವರ ಸ್ಟಾಫ್ ಬಂದು ಹೇಳಿದರು ಮತ್ತು ಡಿಪಾರ್ಟಮೆಂಟ್ ಸೆಕ್ರೆಟರಿ ಕೂಡ ಬಂದು ಹೋದರು. ಟ್ರೇನ್ ಬೆಳಿಗ್ಗೆ 6.00 ಗಂಟೆಗ ಬರಬೇಕಾಗಿತ್ತು. ಆದರೆ ಡಿಲೇ ಆಗಿರುವುದರಿಂದ ಅವರು ಪ್ರಶ್ನೋತ್ತರ ವೇಳೆಗೆ ಬರಲಾಗಲಿಲ್ಲ. ಮುಂದೆ ತೆಗೆದುಕೊಳ್ಳೋಣ. ನೀವು ದಯವಿಟ್ಟು ಸಹಕರಿಸಿ.

ಅಧ್ಯಕ್ಷರು : ಜಿ.ಜಿ. ಶಿವಪ್ಪನವರೇ, ಟ್ರೇನ್ ಡಿಲೇ ಆಗಿರುವ ಕಾರಣ ಶ್ರೀ ಎಂ.ಪಿ. ಪ್ರಕಾಶ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬರಲಾಗಲಿಲ್ಲ. ಟೈಂ ಕೇಳಿದ್ದಾರೆ. ಆದ್ದರಿಂದ ನೀವು ದಯವಿಟ್ಟು ಸಹಕರಿಸಿ ಏಕೆ ಖರ್ಗೆಯವರೇ ನಗುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಸದನ ಇದೆ ಎಂದು ಗೊತ್ತಿರುತ್ತದೆ. ಅದಕ್ಕಾಗಿ ಅವರು ಮೊದಲಾದರೂ ಬರಬೇಕು, ಇಲ್ಲವಾದರೆ ಹೋಗದೆಯಾದರೂ ಇರಬೇಕು. ಏಕೆಂದರೆ ಸದನ ಮತ್ತೆ ಸೇರುವುದಿಲ್ಲ.

ಅಧ್ಯಕ್ಷರು : ನೀವು ಮಂತ್ರಿಯಾಗಿದ್ದಿರಿ, ಮಂತ್ರಿಯಾದವರು ಟ್ರೇನ್ ಓಡಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇದು ಖಾಸ್ತಿಯಾಯಿತು.

ಅಧ್ಯಕ್ಷರು : ಪಟೇಲರೇ ತಾವೇನಾದರೂ ಟ್ರೇನ್ ಬಿಡುತ್ತೀರೇ?

ಶ್ರೀ ಜೆ.ಹೆಚ್. ಪಟೇಲ : ಒಬ್ಬ ವಿಮಾನ ಹಾರಿಸುತ್ತೇನೆ ಎಂದು ಹೇಳಿದ ಬಸ್ ಬಿಡುತ್ತೇನೆ ಎಂದ, ಸೈಕಲ್ ಓಡಿಸುತ್ತೇನೆ ಎಂದ, ನಾವು ಕೇಳಿದ್ವಿ ನೀನು ರೈಲು ಬಿಡುತ್ತಿಯಾ ಎಂದು.ಇಲ್ಲಿಯವರೆಗೆ ಬಿಟ್ಟಿದ್ದು ಅದೇನೆ ಎಂದ.

MR. SPEAKER: So, I just wanted something to review myself, I thought you are.....

ಪ್ರವಾಸಿ ಕೇಂದ್ರಗಳ ಅಭಿವೃದ್ಧಿ.

129 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ್ ಫಾಲ್ಸ ಮತ್ತು ಧುಪದರ್ಮ ಕೇಂದ್ರಗಳನ್ನು ಪ್ರಾವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಪರಿಶೀಲಿಸುವರೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರವಾಸೋದ್ಯಮ ನೀತಿಯಲ್ಲಿ ಗೋಕಾಕ್ ಫಾಲ್ಸನ್ನು 'ಸಿ' ಅಭಿವೃದ್ಧಿಗೆ ಖಾಸಗಿಯಾದ ಸ್ಥಳವೆಂದು ವಿಶೇಷವಾಗಿ ಗುರುತಿಸಲಾಗಿದೆ ಮತ್ತು ಧೂಪದಾಳವನ್ನು 'ಬಿ' ಗುಂಪಿನಲ್ಲಿ ಸೇರಿಸಲಾಗಿದೆ.

ಶ್ರೀ ಚಂದ್ರಶೇಖರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಗೋಕಾಕ್ ತಾಲ್ಲೂಕನ್ನು 'ಸಿ' ಗುಂಪಿನಲ್ಲಿ ಸೇರಿಸಲಾಗಿದೆ. ತುಪ್ಪದಾಳನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಎಷ್ಟೋ ದಿವಸದಿಂದ ಸಾವಿರಾರು ಪ್ರವಾಸಿಗರು ಅಲ್ಲಿ ಬಂದು ಹೋಗುತ್ತಾರೆ. ಅದನ್ನು ಸಹ 'ಬಿ' ಗುಂಪಿಗೆ ತೆಗೆದುಕೊಂಡು ತಾತ್ಕಾರ್ಲಿಕವಾಗಿ ಅಲ್ಲಿ ಪ್ರವಾಸಿಗರಿಗೆ ಇಳಿದುಕೊಳ್ಳಲು ಅಥವಾ ಕ್ಯಾಂಟಿನ್ ವ್ಯವಸ್ಥೆ ಏನೂ ಇಲ್ಲ. ಆದಕಾರಣ ಯೋಜನೇ ಜಾರಿ ಆಗುವವರೆಗೆ ಅಲ್ಲಿ ತಾತ್ಕಾರ್ಲಿಕವಾಗಿ 'ಏನಾದರೂ ವ್ಯವಸ್ಥೆ ಮಾಡುತ್ತೀರೇ ಎಂದು ಕೇಳಬಯಸುತ್ತೇನೆ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಗೋಕಾಕ್ ಫಾಲ್ಸನ್ನು ನಮ್ಮ ಪ್ರವಾಸೋದ್ಯಮ ನೀತಿಯಲ್ಲಿ ಎ.ಬಿ.ಸಿ ಎಂದು ಮೂರು ಕೆಟಗರಿಯನ್ನು ಮಾಡಿದ್ದೇವೆ. ಇದನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಅಂದರೆ ಖಾಸಗಿಯವರು ಇಲ್ಲಿ ಏನಾದರೂ ಬಂಡವಾಳ ತೊಡಗಿಸಿ ಅಲ್ಲಿ ವಾಸೋದ್ಯಮಕ್ಕೆ ಅನುಕೂಲವಾಗತಕ್ಕಂಥ ಹೋಟೆಲ್ ಕಟ್ಟಿಸುವುದು ಅಥವಾ ಪ್ರವಾಸೋದ್ಯಮಕ್ಕೆ ಬೇಕಾಗುವಂಥ ಸಲಕರಣೆಗಳಾಗಲಿ ಒದಗಿಸುವುದಾದರೆ ಅವರಿಗೆ ಕನ್ಸೇಶನ್ ಕೊಡುತ್ತೇವೆ. ಟ್ಯಾಕ್ಸ ಕನ್ಸೇಶನ್ ಕೊಡುತ್ತೇವೆ, ಅವರಿಗೆ ಶೇಕಡಾ 15ರಷ್ಟು ಎಲೆಕ್ಟ್ರಿಸಿಟಿ ರಿಯಾಯಿತಿಯನ್ನು ಕೊಡುತ್ತೇವೆ, ಆ ರೀತಿಯ ಗೋಕಾಕ್ ಫಾಲ್ಸ್‌ನಲ್ಲಿ ಬಂಡವಾಳ ತೊಡಗಿಸಲು ಇನ್ನು ಯಾರೂ ಬಂದಿಲ್ಲ. ಆದರೆ ಸರ್ಕಾರದವರೇ, ಗೋಕಾಕ್ ಫಾಲ್ಸನ್ನು ನಮ್ಮ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಎಂದು ಗುರುತು ಮಾಡಿದ್ದೇವೆ ಅಲ್ಲಿ ಕೆಲವೊಂದು ಇನ್ವೆಸ್ಟ್‌ಮೆಂಟ್ ಆಗಬೇಕಾಗಿದೆ. ಈ ವರ್ಷ ಪ್ರಾರಂಭ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೇ, ಆಗುಂಬೆಯಲ್ಲಿ ಸುಮಾರು 5-6 ವರ್ಷಗಳಿಂದ ಒಂದು ಪ್ರವಾಸೋದ್ಯಮ ಕಟ್ಟಡವನ್ನು ಕಟ್ಟಿಸುತ್ತಿದ್ದಾರೆ. ಅದಕ್ಕೆ 25 ಲಕ್ಷರೂಪಾಯಿ ಇನ್ವೆಸ್ಟಮೆಂಟ್ ಮಾಡಿದ್ದಾರೆ. ಅದನ್ನು ಯಾರಿಗೂ ಪಹಿಸಲೂ ಇಲ್ಲ, ಆ ಬಿಲ್ಡಿಂಗ್ ಕಾಮಗಾರಿ ಕಂಪ್ಲೀಟ್ ಆಗಲೂ